ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಜೋನಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ.,
12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್ ಬೆಂಗಳೂರು-86.

# ದಿನಾಂಕ:-04-12-2021ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚನೆ ಪತ್ರ ಸಂಖ್ಯೆ ಪ12(5)/ಪಿಆರ್/35/2020-21 ದಿನಾಂಕ:21-09-2020
(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್./33/2021-22 ದಿನಾಂಕ:02-12-2021

| ಕ್ರಸಂ | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ವಿಶ್ವನಾಥ್ | ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ಜೋನಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ67 |
| 2. | ಶ್ರೀ. ಬಿ. ಸಿ ರವಿಕುಮಾರ್ | ಸಹಾಯಕ ಅಭಿಯಂತರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು |
| 3. | ಶ್ರೀಮತಿ. ಗೀತಾ ಕಿನಾಲ್ | ವಾರ್ಡ್ ಸಮಿತಿ ಸದಸ್ಯರು |
| 4. | ಶ್ರೀ. ರಾಮಚಂದ್ರ | 1ನೇ 'ಎನ್' ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು |
| 5. | ಶ್ರೀ ಅಕಾಲ್ | ವಾರ್ಡ್ ಸಮಿತಿ ಸದಸ್ಯರು |
| 6. | ಶ್ರೀ. ಕೆ ಗಂಗಹನುಮಯ್ಯ | ವಾರ್ಡ್ ಸಮಿತಿ ಸದಸ್ಯರು |
| 7. | ಶ್ರೀ. ಎಚ್ ಎಂ ಗಂಗಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು. |
| 8. | ಶ್ರೀ. ಛಾಯಾಪತಿ (ವಾರ್ಡ್-44) | ಕಿರಿಯ ಆರೋಗ್ಯ ಪರಿವೀಕ್ಷಕರು.(ಪ್ರಭಾರ)ವಾರ್ಡ್-67 |
| 9. | ಶ್ರೀ. ದರ್ಶನ್ | ಮಾರ್ಷಲ್ ವಾರ್ಡ್ ಸಂಖ್ಯೆ-67. |
| 10. | ಶ್ರೀ.ಮಂಜುನಾಥ್ | ತೋಟಗಾರಿಕೆ ಇಲಾಖೆ ಸಿಬ್ಬಂದಿ. |
| 11. | ಶ್ರೀ.ಪ್ರಸನ್ನ ಕುಮಾರ್ | ಪೊಲೀಸ್ ಪಿಸಿ ಮಲ್ಲೇಶ್ವರಂ ಸಂಚಾರಿ ಪೊಲೀಸ್ ಠಾಣೆ. |
| 12. | ಶ್ರೀ. ಪ್ರವೀಣ್ ಕುಮಾರ್ | ಪೊಲೀಸ್ ಪಿಸಿ ರಾಜಾಜಿನಗರ ಸಂಚಾರಿ ಪೊಲೀಸ್ ಠಾಣೆ. |
| 13. | ಶ್ರೀ.ಮುನಿಸ್ವಾಮಯ್ಯ | ಮಲ್ಲೇಶ್ವರಂ ಸಂಚಾರಿ ಪೊಲೀಸ್ ಠಾಣೆ. |
| 14. | ಶ್ರೀ.ಮಂಜು | ಸಹಾಯಕ ಪೊಲೀಸ್ ಇನ್‌ಸ್ಪೆಕ್ಟರ್ ರಾಜಾಜಿನಗರ ಸಂಚಾರಿ ಪೊಲೀಸ್ ಠಾಣೆ. |
| 15. | ಶ್ರೀ. ಲಕ್ಷ್ಮೀಕಾಂತ ಎಂ.ಆರ್ | ಬೆಂ.ಜ.ಮಂ ಎನ್.ಡಬ್ಲ್ಯೂ-2 ಸಿಬ್ಬಂದಿ. |
| 16. | ಶ್ರೀ.ಬೈರಪ್ಪ | ಸಹಾಯಕ ಪೊಲೀಸ್ ಇನ್‌ಸ್ಪೆಕ್ಟರ್,ಮಹಾಲಕ್ಷ್ಮೀಲೇಔಟ್ ಪೊಲೀಸ್ ಠಾಣೆ. |

ಪ್ರ.ತಿ.ನೋ.



Scanned by CamScanner

| | | |
|---|---|---|
| 17. | ಶ್ರೀ. ರಾಹುಲ್ | ಬೆಂ.ಜ.ಮಂ ಸಿಬ್ಬಂದಿ. |
| 18. | ಶ್ರೀ. ಗುರುಮೂರ್ತಿ | ಘ.ತ್ಯಾ.ನಿ ವಾರ್ಡ್-67 ಸೂಪರ್‌ವೈಸರ್ |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಡಿಸೆಂಬರ್ ಮಾಹೆಯ ದಿ:04/12/2021 ರಂದು ಬೆಳಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

| | |
|---|---|
| ಶ್ರೀ ರಾಮಚಂದ್ರ<br>1ನೇ 'ಎನ್' ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ | ವಾರ್ಡ್‌ನ 19ನೇ ಮೈನ್‌ನ ಎನ್.ಪಿ.ಎಸ್ ಶಾಲೆಯ ಹತ್ತಿರ ಕಾಂಪೌಂಡ್ ಗೋಡೆಗೆ ಮೂತ್ರ ವಿಸರ್ಜನೆ ಮಾಡುತ್ತಾರೆ ಇದರಿಂದ ಅಕ್ಕ ಪಕ್ಕದ ಮನೆಯವರಿಗೆ ಹಾಗು ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ಬಹಳ ತೊಂದರೆ ಉಂಟಾಗುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಮಾಷಲ್ ಪ್ಯಾಟ್‌ರೋಲಿಂಗ್ ಮಾಡಿ ದಂಡ ಹಾಕಬೇಕು ಎಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ ರಾಮಚಂದ್ರ<br>1ನೇ 'ಎನ್' ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ | ವಾರ್ಡ್‌ನ 19ನೇ ಮೈನ್‌ನ ಎನ್.ಪಿ.ಎಸ್ ಶಾಲೆಯ ಹತ್ತಿರ ಉಚಿತ ಶೌಚಾಲಯದಲ್ಲಿ ಮೂತ್ರ ವಿಸರ್ಜನೆಗೆ 3ರೂ ಗಳನ್ನು ನಿರ್ವಹಣೆ ಮಾಡುವವರು ನಿಗದಿ ಮಾಡಿದ್ದಾರೆ ಇದರಿಂದಾಗಿ ಸಾರ್ವಜನಿಕರು ಶೌಚಾಲಯ ಉಪಯೋಗಿಸದೆ ರಸ್ತೆ ಬದಿಗೆ ಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ, ನಿರ್ವಹಣೆ ಮಾಡುವವರು ಪಾವತಿ ಮಾಡಬೇಕಾದ ಮೊತ್ತವನ್ನು ಬೋರ್ಡ್‌ನಲ್ಲಿ ಬರೆಯಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸದರಿ ಶೌಚಾಲಯವು ಆರೋಗ್ಯ ವಿಭಾಗದವರ ವ್ಯಾಪ್ತಿಗೆ ಬರುವುದರಿಂದ ಕಿರಿಯ ಆರೋಗ್ಯ ಪರೀವಿಕ್ಷಕರು ಸ್ಥಳ ಪರೀಶಿಲಿಸಿ ಕ್ರಮವಹಿಸಬೇಕೆಂದು ಸಭೆಯಲ್ಲಿ ತಿಳಿಸಿದರು. |
| ಶ್ರೀಮತಿ. ಗೀತಾ ಕೇನಾಲ್<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನಲ್ಲಿ ಹಲವು ಮನೆಗಳಿಗೆ ಬಿ.ಬಿ.ಎಂ.ಪಿ ವತಿಯಿಂದ ನೋಟಿಸ್ ನೀಡಲಾಗಿದ್ದು ಯಾವ ಯಾವ ದಾಖಲೆಗಳನ್ನು ಕಛೇರಿಗೆ ಸಲ್ಲಿಸಬೇಕೆಂದು ಸಭೆಯಲ್ಲಿ ಮಾಹಿತಿ ಪಡೆದುಕೊಂಡರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್ ವ್ಯಾಪ್ತಿಯಲ್ಲಿ 'ಬಿ' ಖಾತಾ ಸ್ವತಿನ ಮಾಲಿಕರಿಗೆ ಹಾಗು ಅನಾಧಿಕೃತ ಕಟ್ಟಡ ನಿರ್ಮಾಣ ಮಾಡುವವರಿಗೆ ನೋಟಿಸ್ ನೀಡಲಾಗುತ್ತಿದ್ದು ಕಟ್ಟಡದ ದಾಖಲೆಗಳಾದ ಖಾತಾ ಪ್ರಮಾಣ ಪತ್ರಗಳು, ಮಂಜೂರಾದ ನಕ್ಷೆ, ಕಟ್ಟಡ ನಿರ್ಮಾಣ ಪ್ರಾರಂಭಿಸುವ ಪ್ರಮಾಣ ಪತ್ರ, ಸ್ವಾಧೀನಾನುಭವ ಪ್ರಮಾಣ ಪತ್ರ ಮತ್ತು ಪಾಲಿಕೆಗೆ ಪ್ರತಿ ವರ್ಷ ಕಂದಾಯ ಪಾವತಿಸಿರುವ ರಸೀದಿಗಳನ್ನು ವಾರ್ಡ್‌ನ ಸಹಾಯಕ ಕಾರ್ಯಪಾಲಕ ಅಭಿಯಂತರರ ಬಿಬಿಎಂಪಿ ಕಚೇರಿಗೆ ಸಲ್ಲಿಸಲು ಸೂಚಿಸಲಾಗಿದೆ ಎಂದು ಸಭೆಗೆ ಮಾಹಿತಿ ಒದಗಿಸಿದರು. |

4/12/2021

ಪು.ತಿ.ನೋ.



Scanned by CamScanner

| | |
|---|---|
| ಶ್ರೀ.ಪ್ರಸನ್ನ ಕುಮಾರ್ ಪೊಲೀಸ್ ಪಿಸಿ ಮಲ್ಲೇಶ್ವರಂ ಸಂಚಾರಿ ಪೊಲೀಸ್ ಠಾಣೆ. | ವಾರ್ಡ್‌ನ ಒರಿಯನ್ ಮಾಲ್ ಎದುರು ರಸ್ತೆ ಹಾಗು ಸೋಪ್ ಫ್ಯಾಕ್ಟರಿ ವೃತದ ರಸ್ತೆಗೆ ಡಾಂಬರಿಕರಣ ಮಾಡದೆ ರಸ್ತೆ ಬಹಳ ಹಾನಿಯಾಗಿದೆ, ಆ ರಸ್ತೆಯು ಅತಿ ಎಚ್ಚು ವಾಹನಗಳು ಸಂಚರಿಸುವ ರಸ್ತೆಯಾಗಿದ್ದು ವಾಹನ ಸವಾರರಿಗೆ ಬಹಳ ತೊಂದರೆ ಉಂಟಾಗುತ್ತಿರುತ್ತದೆ ಆದಷ್ಟು ಬೇಗ ರಸ್ತೆಗೆ ಡಾಂಬರಿಕರಣ ಮಾಡಲು ಸಭೆಯಲ್ಲಿ ಮನವಿ ಮಾಡಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಮಲ್ಲೇಶ್ವರಂ ಸಂಚಾರಿ ಪೊಲೀಸ್ ರವರ ದೂರಿಗೆ ಸಂಭಂದಿಸಿದಂತೆ ಒರಿಯನ್ ಮಾಲ್ ಎದುರು ಹಾಗು ಸೋಪ್ ಫ್ಯಾಕ್ಟರಿ ವೃತದ ರಸ್ತೆಯು ರಸ್ತೆ ಮೂಲಸೌಕರ್ಯ ರವರ ವ್ಯಾಪ್ತಿಗೆ ಸೇರಿದ್ದು ರಸ್ತೆ ಮೂಲಸೌಕರ್ಯ ಕಾರ್ಯಪಾಲಕ ಅಭಿಯಂತರರಿಗೆ ದೂರವಾಣಿ ಮುಖೇನ ಚರ್ಚಿಸಿದರು ಹಾಗು ರಸ್ತೆಗೆ 3 ದಿನಗಳೊಳಗೆ ಡಾಂಬರಿಕರಣ ಮಾಡಲಾಗುವುದೆಂಬ ಮಾಹಿತಿ ಪಡೆದುಕೊಂಡರು. |
| ಶ್ರೀ ರಾಮಚಂದ್ರ 1ನೇ 'ಎನ್' ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ | ವಾರ್ಡ್‌ನ 5ನೇ ಹಾಗು 7ನೇ ಅಡ್ಡ ರಸ್ತೆಗಳಲ್ಲಿ ಮರಗಳ ಟ್ರೀಮಿಂಗ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀಮತಿ. ಗೀತಾ ಕೀನಾಲ್ ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ 19ನೇ 'ಇ' ಮೈನ್‌ನಲ್ಲಿ ಮರಗಳ ಟ್ರೀಮಿಂಗ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ ಆಕಾಶ್ ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ಅನನ್ಯ ಆಸ್ಪತ್ರೆ ಹತ್ತಿರ ಮರಗಳ ಟ್ರೀಮಿಂಗ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ-67 ಹಾಗು ಸಮಿತಿ ಕಾರ್ಯದರ್ಶಿಗಳು. | ವಾರ್ಡ್‌ನ ಭೋವಿಪಾಳ್ಯ 10ನೇ ಕ್ರಾಸ್‌ನಲ್ಲಿ ರಸ್ತೆ ಬದಿಯಲ್ಲಿ ಶೀಥಿಲಗೊಂಡಿರುವ ಮರವು ಬೆಳೆದು ಶಿಟ್ ಮನೆಗಳ ಮೇಲೆ ಭಾಗಿದ್ದು ಮರವು ಬಿದ್ದಲ್ಲಿ ಬಹಳ ತೊಂದರೆ ಉಂಟಾಗುತ್ತದೆ, ಕೂಡಲೇ ಮರವನ್ನು ತೆರವುಗೊಳಿಸಲು ಸಭೆಗೆ ಹಾಜರಿದ್ದ ಅರಣ್ಯ ಇಲಾಖೆ ಸಿಬ್ಬಂಧಿಗೆ ಸಾರ್ವಜನಿಕರು ತಮ್ಮ ಕಛೇರಿಗೆ ಸಲ್ಲಿಸಿರುವ ಮನವಿ ಪತ್ರ ಸಲ್ಲಿಸಿ ಮರವನ್ನು ತೆರವುಗೊಳಿಸುವ ಕ್ರಮವಹಿಸಲು ಸೂಚಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಎಲ್ಲ ಅರಣ್ಯ ಇಲಾಖೆ ದೂರಿಗೆ ಸಂಭಂದಿಸಿದಂತೆ ಕ್ರಮವಹಿಸಲು ಅರಣ್ಯ ಇಲಾಖೆ ಸಿಬ್ಬಂಧಿಗೆ ಸಭೆಯಲ್ಲಿ ಸೂಚಿಸಿದರು ಹಾಗು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ದೂರವಾಣಿ ಮುಖೇನ ಕರೆ ಮಾಡಿ ಸೂಚಿಸಲಾಯಿತು. |
| ಶ್ರೀ. ಮಲ್ಲಯ್ಯ ಅರಣ್ಯ ಇಲಾಖೆ ಸಿಬ್ಬಂದಿ | ವಾರ್ಡ್‌ನ ಸಮಿತಿ ಸದಸ್ಯರು ಹಾಗು ಸಹಾಯಕ ಅಭಿಯಂತರರ ದೂರಿಗೆ ಸಂಭಂದಿಸಿದಂತೆ ಕ್ರಮವಹಿಸಲಾಗುವುದಾಗಿ ಸಭೆಗೆ ಭರವಸೆ ನೀಡಿದರು. |
| ಶ್ರೀ ಆಕಾಶ್ ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ಕೇತಮಾರನಹಳ್ಳಿಯ ಉದಯಕುಮಾರ್ ಉದ್ಯಾನದ ಎದುರು ತರಕಾರಿ ಮಾರಾಟ ಮಳಿಗೆಯವರು ರಸ್ತೆಯ ಪಾದಚಾರಿ ಮಾರ್ಗ ಒತ್ತುವರಿ ಮಾಡಿ ತರಕಾರಿ ವ್ಯಾಪಾರ ಮಾಡುತ್ತಿದ್ದಾರೆ ಇದರಿಂದ ಪಾದಚಾರಿಗಳಿಗೆ ಬಹಳ ತೊಂದರೆ ಉಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಕಾಮಗಾರಿ ವಿಭಾಗದ ಸಹಾಯಕ ಅಭಿಯಂತರರು ಕ್ರಮವಹಿಸಲು ಸೂಚಿಸಿದರು. |
| ಶ್ರೀ ರಾಮಚಂದ್ರ 1ನೇ 'ಎನ್' ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ | ವಾರ್ಡ್‌ನ 7ನೇ ಅಡ್ಡ ರಸ್ತೆಯಲ್ಲಿ ಕ್ಯಾಟ್ ಐಸ್ ಹಾಕಬೇಕು ಹಾಗು ಹಂಪ್ಸ್‌ಗೆ ಪೈಂಟಿಂಗ್ ಮಾಡಬೇಕು ಇಲ್ಲಾವಾದಲ್ಲಿ ರಾತ್ರಿ ವೇಳೆ ರಸ್ತೆಯ ಹಂಪ್ಸ್ ಕಾಣದೆ ಅಪಘಾತವಾಗುವ ಸಂಭವವಿರುತ್ತದೆ , ಇಗಾಗಲೇ 2 ಅಪಘಾತವಾಗಿರುತ್ತವೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |

4/12/2021

ಮು.ಶಿ.ನೋ.



Scanned by CamScanner

| | |
|---|---|
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ 7ನೇ ಅಡ್ಡ ರಸ್ತೆಯ ದೂರಿನ ಕುರಿತು ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸುತ್ತ ಮುಲಭೂತ ಸೌಕರ್ಯದ ಟಿ.ಇ.ಸಿ ಕಾರ್ಯಪಾಲಕ ಅಭಿಯಂತರರು ಕ್ಯಾಟ್ ಐಸ್ ಹ ಹಂಪ್ಸ್‌ಗೆ ಪೈಂಟಿಂಗ್ ತುರ್ತಾಗಿ ನಿರ್ವಹಿಸುವಂತೆ ದೂರವಾಣಿ ಮೂಖೇನ ತಿಳಿಸಿದರು ಮತ್ತು ರಾಜಾಜಿನಗರ 1ನೇ ಬ್ಲಾಕ್‌ನ ನಿವಾಸಿಗಳ ಕ್ಷೇಮಾಭಿವೃಧಿ ಸಂಘದ ಅಧ್ಯಕ್ಷರಿಗೆ ಅವರ ದೂರವಾಣಿ ಸಂಖ್ಯೆ ನೀಡಿದರು. |
| ಶ್ರೀಮತಿ. ಗೀತಾ ಕೀನಾಲ್<br>ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ಕೇತಮಾರನಹಳ್ಳಿ ಉದ್ಯಾನದ ಸುತ್ತಲು ರಸ್ತೆಯಲ್ಲಿ ಗುಂಡಿಗಳಾಗಿವೆ ಇದರಿಂದ ಪಾದಚಾರಿಗಳಿಗೆ ಹಾಗು ವಾಹನ ಸವಾರರಿಗೆ ತೊಂದರೆ ಉಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರರು<br>ವಾರ್ಡ-67 ಹಾಗು ಸಮಿತಿ<br>ಕಾರ್ಯದರ್ಶಿಗಳು. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ಕೇತಮಾರನಹಳ್ಳಿ ಉದ್ಯಾನದ ಸುತ್ತಲು ಪಾಟ್ ಹೋಲ್ ಪ್ಯಾಚ್ ವರ್ಕ್ ಮಾಡಲಾಗುವುದಾಗಿ ಸಭೆಗೆ ಮಾಹಿತಿ ಒದಗಿಸಿದರು. |
| ಶ್ರೀ ರಾಮಚಂದ್ರ<br>1ನೇ 'ಎನ್' ಬ್ಲಾಕ್ ನಿವಾಸಿಗಳ<br>ಕ್ಷೇಮಾಭಿವೃಧಿ ಸಂಘ | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ಗಣೇಶ ದೇವಾಲಯದ ಹಿಂಭಾಗದ ಉದ್ಯಾನದಲ್ಲಿ ಕುಳಿತು ಕೊಳ್ಳಲು ಗ್ರಾನೈಟ್ ಕುರ್ಚಿಗಳನ್ನು ಹಾಕಿ ಕೊಡಲು ಕೋರಿರುತ್ತೇನೆ, ಇದರ ಬಗ್ಗೆ ಸಹಾಯಕ ಅಭಿಯಂತರರಿಂದ ಮಾಹಿತಿ ಪಡೆದುಕೊಂಡರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರರು<br>ವಾರ್ಡ-67 ಹಾಗು ಸಮಿತಿ<br>ಕಾರ್ಯದರ್ಶಿಗಳು. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ಗಣೇಶ ದೇವಾಲಯದ ಹಿಂಭಾಗದ ಉದ್ಯಾನದಲ್ಲಿ ಕುಳಿತು ಕೊಳ್ಳಲು ಗ್ರಾನೈಟ್ ಕುರ್ಚಿಗಳನ್ನು ಹಾಕುವ ಕಾಮಗಾರಿ ಕಡತವು ಅನುಮೋದನೆಗೊಂಡಿದ್ದು ಗ್ರಾನೈಟ್ ಕುರ್ಚಿಗಳನ್ನು ಇನ್ನು 15ದಿನಗಳಲ್ಲಿ ಹಾಕಿಕೊಡುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ ರಾಮಚಂದ್ರ<br>1ನೇ 'ಎನ್' ಬ್ಲಾಕ್ ನಿವಾಸಿಗಳ<br>ಕ್ಷೇಮಾಭಿವೃಧಿ ಸಂಘ | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ಹರೇ ಕೃಷ್ಣ ಉದ್ಯಾನದ ಹತ್ತಿರ ಸ್ಕೈ ವಾಕ್ ಇದ್ದು ಸ್ಕೈ ವಾಕ್ ನಿಂದ ಇಳಿಯುವವರರಿಗೆ ಪಕ್ಕದ 20ನೇ ಮೈನ್ ರಸ್ತೆಗೆ ಹೋಗಲು ತೊಂದರೆ ಆಗುತ್ತಿರುತ್ತದೆ ಅದ್ದರಿಂದ ಸ್ಕೈ ವಾಕ್ ಇಳಿದು ಹರೇ ಕೃಷ್ಣ ಉದ್ಯಾನದಿಂದ ಸದರಿ ರಸ್ತೆಗೆ ಹೋಗಲು ಪಾದಚಾರಿ ಮಾರ್ಗ ಮಾಡಿದರೆ ಬಹಳ ಅನುಕುಲವಾಗುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ವಾರ್ಡ್‌ನ ಸಹಾಯಕ ಅಭಿಯಂತರರು ಹಾಗು ಸಹಾಯಕ ಕಾರ್ಯಪಾಲಕ ಅಭಿಯಂತರರು ಸ್ಥಳ ಪರೀಶಿಲಿಸಿ ವರದಿ ನೀಡುವಂತೆ ತಿಳಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಕಪ್ಪು ಚುಕ್ಕಿ ಪ್ರದೇಶಗಳನ್ನು ಕಣ್ಣ್‌ಗಾವಲು ಮಾಡಿ ಅಂತವರಿಗೆ ದಂಡ ವಿಧಿಸಲು ಹಾಗು ಸಾರ್ವಜನಿಕರಿಗೆ ಅರಿವು ಮೂಡಿಸಲು ನಿರ್ದೇಶಿಸಲಾಯಿತು ಮುಂದುವರಿಯುತ ಒಣ ತ್ಯಾಜ್ಯ ಸಂಗ್ರಹಕಾರರು ಮನೆ ಮನೆಯಿಂದ ಸಂಗ್ರಹಿಸುವ ಒಣ ತ್ಯಾಜ್ಯವನ್ನು ಅವರ ವತಿಯಿಂದಲೇ ಸಂಸ್ಕರಿಸಿ ನಿರ್ವಹಿಸಲ ಸೂಚಿಸುವುದು ಒಂದು ವೇಳೆ ಅನುಪಯುಕ್ತ ಒಣ ತ್ಯಾಜ್ಯವನ್ನು ರಸ್ತೆಗೆ ಬಿಸಾಡಿದಲ್ಲಿ ಅವರಿಗೆ ದಂಡ ವಿಧಿಸಲು ಸೂಚಿಸಲಾಯಿತು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರರು<br>ವಾರ್ಡ-67 ಹಾಗು ಸಮಿತಿ<br>ಕಾರ್ಯದರ್ಶಿಗಳು. | ವಾರ್ಡ್‌ನ ಕಳೆದ ಸಮಿತಿ ಸಭೆಗಳಲ್ಲಿ ನೀಡಲಾಗಿರುವ ರಸ್ತೆ ಗುಂಡಿಗಳ ದೂರಿಗೆ ಸಂಭಂದಿಸಿದಂತೆ ರಸ್ತೆ ಗುಂಡಿಗಳಿಗೆ ಪ್ಯಾಚ್ ವರ್ಕ್ ಮಾಡಲಾಗುತ್ತಿದೆ ಹಾಗು ಬೆಸ್ಕಾಂರವರು ರಸ್ತೆ ಅಗೆದ ಗುಂಡಿಗಳಿಗೆ ಬೆಸ್ಕಾಂ ವತಿಯಿಂದ ಪ್ಯಾಚ್ ವರ್ಕ್ ಮಾಡಲಾಗುತ್ತಿದೆ ಎಂದು ಸಭೆಗೆ ಮಾಹಿತಿ ಒದಗಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಹಿರಿಯ ಆರೋಗ್ಯ ಪರೀವಿಕ್ಷಕರು ಹಾಗು ವಾರ್ಡ್ ಮಾರ್ಷ್‌ಲ್ ನಿಷೇದಿತ ಹಾಗು ಏಕ ಬಳಕೆ ಪ್ಲಾಸ್ಟಿಕ್ ರೈಡ್ ಮಾಡಿ ದಂಡ ಹಾಕಬೇಕು ಇದರ ಬಗ್ಗೆ ಕ್ರಮ ವಹಿಸಬೇಕು ಎಂದು ಸಭೆಯಲ್ಲಿ ತಿಳಿಸಿದರು. |
| ಶ್ರೀಮತಿ. ಗೀತಾ ಕೀನಾಲ್<br>ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ಕೇತಮಾರನಹಳ್ಳಿ ಉದ್ಯಾನವು ತಾತ್ಕಾಲಿಕವಾಗಿ ಮುಚ್ಚಿರುತ್ತಾರೆ ಮತ್ತು ಉದ್ಯಾನದಲ್ಲಿ ದೀಪಗಳು ಇರುವುದಿಲ್ಲ ಇನ್ನು ಉದ್ಯಾನವನ್ನು ಎಂದಿನಂತೆ ಉಪಯೋಗಿಸಲು ಎಷ್ಟು ದಿನಗಳಾಗಬಹುದೆಂದು ಸಭೆಯಲ್ಲಿ ಮಾಹಿತಿ ಪಡೆದುಕೊಂಡರು. |



ಪು.ತಿ.ನೋ.
4/12/2024

Scanned by CamScanner

| | |
|---|---|
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್–67 ಹಾಗು ಸಮಿತಿ ಕಾರ್ಯದರ್ಶಿಗಳು. | ವಾರ್ಡ್‌ನ ಕೇತಮಾರನಹಳ್ಳಿ ಉದ್ಯಾನದಲ್ಲಿ ಅಭಿವೃದಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಉದ್ಯಾನವನ್ನು ಇನ್ನು 10 ದಿನಗಳ ನಂತರ ಎಂದಿನಂತೆ ಸಾರ್ವಜನಿಕರು ಉಪಯೋಗಿಸಬಹುದೆಂದು ಸಭೆಯಲ್ಲಿ ಮಾಹಿತಿ ಒದಗಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಮನೆ ಮೇಲೆ ಮಳೆ ನೀರು ಬಿದ್ದು ಹೋರಬರುವ ಪೈಪ್ ಅನ್ನು ಒಳಚರಂಡಿ ಪೈಪ್‌ಗೆ ಕಲವರು ಕನೆಕ್ಟ್ ಮಾಡಿರುತ್ತಾರೆ ಅದನ್ನು ಮಾಡದಿರಲು ಅರಿವು ಮುಡಿಸಲು ಆರ್.ಡಬ್ಲ್ಯೂ.ಎ ಸಂಘಗಳಿಗೆ ತಿಳಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಜಿಯೋ ಖಾಸಗಿ ಕಂಪನಿಯವರು ಒ.ಎಫ್.ಸಿ ಕೇಬಲ್ ಅಳವಡಿಸಲು ಎಲ್ಲೆಂದರಲ್ಲಿ ರಸ್ತೆ ಅಗೆದು ಗುಂಡಿಗಳನ್ನು ಮಾಡಿರುತ್ತಾರೆ. ಅದ್ದರಿಂದ ಅಧೀಕ್ಷಕ ಅಭಿಯಂತರರು ಒ.ಎಫ್.ಸಿ ರವರಿಗೆ ಪತ್ರ ಬರೆಯಲು ವಾರ್ಡ್‌ನ ಸಹಾಯಕ ಅಭಿಯಂತರರಿಗೆ ಸೂಚಿಸಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಹಿರಿಯ ಆರೋಗ್ಯ ಪರೀವಿಕ್ಷಕರನ್ನು ಉದೇಶಿಸಿ ಕೋವಿಡ್ ಪ್ರಕರಣಗಳನ್ನು ನಿಗ ವಹಿಸಿ ತುರ್ತು ಕ್ರಮ ಕೈಗೊಳಲು ಮತ್ತು ಸುಕ್ತ ಚಿಕಿತ್ಸೆ ಕೊಡಿಸಲು ಕ್ರಮ ಕೈಗೊಳಲು ತಿಳಿಸಿದರು ಮತ್ತು ಕೋವಿಡ್ ಪ್ರಗತಿ ಪರಿಶಿಲನೇ ಮಾಡಿದರು. |

**ಪ್ರತಿಯನ್ನು**

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಕೇಂದ್ರ ರವರ ಅವಗಾಹನ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

| | |
|---|---|
| ಕಾರ್ಯದರ್ಶಿ ಹಾಗೂ<br>ಸಹಾಯಕ ಅಭಿಯಂತರರು, ವಾರ್ಡ್– 67<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 4/12/2024<br>ಅಧ್ಯಕ್ಷರು ಹಾಗೂ<br>ನೋಡಲ್ ಅಧಿಕಾರಿಗಳು ವಾರ್ಡ್– 67<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

ಪು.ತಿ.ನೋ.



Scanned by CamScanner